ಸಭೆಗಳ ಮತ್ತು ಮಂಡಲ ಪಂಚಾಯತ್‌ಗಳ ವಿಚಾರಗಳನ್ನು ಗಣನೆಗೆ ತೆಗೆದುಕೊಂಡು ಈಗ ತಯಾರಿಸಲ್ಪಡುತ್ತಿವೆ.

ಶ್ರೀ ಹೆಚ್.ಎಸ್. ಪಾಟೀಲ್ : ರಾಜ್ಯ ಸರ್ಕಾರದ ವಿನಂತಿ ಮೇರೆಗೆ ಕೇಂದ್ರ ಸರ್ಕಾರದವರು ನೇರವಾಗಿ ಸಮೀಕ್ಷೆ ನಡೆಸಿ ಹತ್ತು ವರ್ಷಗಳ ಅಂಕಿ ಅಂಶಗಳ ಆಧಾರದ ಮೇಲೆ ರಾಯಚೂರು ಜಿಲ್ಲೆ ಹಿಂದುಳಿದ ಜಿಲ್ಲೆ ಎಂದು ಪ್ರಕಟಿಸಿದ್ದಾರೆ. ಆದರೂ ಆ ಜಿಲ್ಲೆಗೆ 2-3 ವರ್ಷಗಳಿಂದ ವಿಶೇಷವಾದ ಹಣಕಾಸಿನ ನೆರವು ನೀಡಿಲ್ಲ. ಇವತ್ತಿನ ದಿವಸ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿಯು ಹೆಚ್ಚಿಗೆ ಹಣವನ್ನು ಒದಗಿಸಿ ಗುಲ್ಬರ್ಗಾ ಜಿಲ್ಲೆಗೆ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟಿದೆ. ಅದೇ ರೀತಿ ನಮ್ಮ ರಾಯಚೂರು ಜಿಲ್ಲೆಗೆ ಸಮೀಕ್ಷೆಯ ವರದಿಯ ಆಧಾರದ ಮೇಲೆ ಹೆಚ್ಚಿನ ಹಣಕಾಸನ್ನು ಒದಗಿಸಿ ಅಸಮತೋಲನವನ್ನು ನಿವಾರಿಸಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳನ್ನು ಒತ್ತಾಯಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೆ, ಇಲ್ಲಿ ಪ್ರಶ್ನೆ ಇರತಕ್ಕದ್ದು ಜಿಲ್ಲಾವಾರು ಯೋಜನೆ ಬಗ್ಗೆ ಮತ್ತು ಅದನ್ನು ಹೇಗೆ ತಯಾರು ಮಾಡುತ್ತಾರೆ ಎಂಬುದು. ಮಾನ್ಯ ಸದಸ್ಯರು ರಾಯಚೂರು ಜಿಲ್ಲೆಗೆ ಹೆಚ್ಚಾಗಿ ಹಣವನ್ನು ಒದಗಿಸಬೇಕು ಎಂದು ಕೇಳಿದ್ದಾರೆ. ಒಂದು ವಿಷಯವನ್ನು ನಾವು ಇಲ್ಲಿ ಗಮನಿಸಬೇಕಾಗುತ್ತದೆ. ಜಿಲ್ಲಾ ಪರಿಷತ್ತುಗಳು ಅಸ್ತಿತ್ವಕ್ಕೆ ಬಂದಮೇಲೆ ರಾಜ್ಯ ಮಟ್ಟಕ್ಕೆ ಯೋಜನೆಗಳನ್ನು ನಾವು ಏನು ತಯಾರು ಮಾಡುತ್ತಿದ್ದೆವು ಅದನ್ನು ಡಿಸ್ಟ್ರಿಕ್ಟ್ ಪ್ಲಾನ್ಸ್ ಅಥವಾ ಜಿಲ್ಲಾ ಯೋಜನೆಗಳು ಎಂದು ಮಾಡಿದ್ದೇವೆ. ಈ ಸಂದರ್ಭದಲ್ಲಿ ಇದರ ಬಗ್ಗೆಯೂ ಕೂಡ ಅನೇಕ ತಕರಾರುಗಳು ಬಂದಿದೆ. ಉದಾಹರಣೆಗೆ ಪ್ರಾಥಮಿಕ ಶಿಕ್ಷಣ, ಆರೋಗ್ಯ ಇವನ್ನೆಲ್ಲಾ ತೆಗೆದುಕೊಂಡುಹೋಗಿ ಅವರ ಹತ್ತಿರ ವಿತಕ್ಕೆ ಕೊಡುತ್ತೀರಿ ತೋಟಗಾರಿಕೆ ಇದೆಲ್ಲಾ ಅವರಿಗೆ ಕೊಡಬೇಡಿ, ಜಿಲ್ಲಾವಾರು ಯೋಜನೆಯನ್ನು ಜಿಲ್ಲಾ ಪರಿಷತ್ ವ್ಯಾಪ್ತಿಯಿಂದ ತೆಗೆದು ಹಾಕಿಬಿಡಿ ಎಂಬ ಒತ್ತಡ ಬಂದಿದೆ. ಅದೇನೇ ಇರಲಿ, ಈಗಿನ ಸರ್ಕಾರ ನೀತಿ ಪ್ರಕಾರಲ್ಲಾ ತೆಗೆದುಹಾಕುವುದಾಗಲೀ ಜಿಲ್ಲಾ ಪರಿಷತ್ ಅಧಿಕಾರ ವ್ಯಾಪ್ತಿ ಕುಂಠಿತಗೊಳಿಸುವ ಬಗ್ಗೆ ನಮ್ಮ ಗಮನ ಇಲ್ಲ. ಮತ್ತು ಆ ರೀತಿ ಮಾಡತಕ್ಕ ಪ್ರಮೇಯವೂ ಇಲ್ಲ. ಈ ಸಂದರ್ಭದಲ್ಲಿ ಕೆಲವು ಜಿಲ್ಲೆಗಳಿಗೆ ಡಿಸ್ಟ್ರಿಕ್‌ಪ್ಲಾನ್ಸ್ ಮಾಡಬೇಕಾದರೆ ಹಣಕಾಸಿನ ಕೊರತೆ ಬಂದಿದೆ, ಯೋಜನೆಯ ಗಾತ್ರ ಕಡಿಮೆಯಾಗಿದೆ, ಕೆಲಸಕಾರ್ಯಗಳು ನಡೆಯುತ್ತಿಲ್ಲ ಎನ್ನುವ ಮಾತು ಗಮನಕ್ಕೆ ಬಂದಿದೆ. 1990-91ಕ್ಕೆ ಹೋಲಿಸಿದರೆ ಹೆಚ್ಚಿನ ಹಣವನ್ನು 1991-92ರಲ್ಲಿ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತ್ ವ್ಯಾಪ್ತಿಗೆ ಬರತಕ್ಕ ವಿಚಾರದಲ್ಲಿ ಒದಗಿಸಿದ್ದೇವೆ. ಆದ್ದರಿಂದ ಇನ್ನು ಮೇಲೆ ಅನೇಕ ಜಿಲ್ಲೆಗಳಲ್ಲಿ ಅಂದರೆ ತಮ್ಮ ರಾಯಚೂರು ಜಿಲ್ಲೆಯೂ ಸೇರಿಕೊಂಡಂತೆ ಅದರ ಉಪಯೋಗ ಆಗಬಹುದು ಎಂಬ ಮಾತನ್ನು ಹೇಳುತ್ತಿದ್ದೇನೆ.

ಯಗಚಿ ಅಣೆಕಟ್ಟಿನ ಜನ ಬಲದಂಡೆ ನಾಲೆ.

1557 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೇಲೂರು ಯಗಚಿ ಅಣೆಕಟ್ಟು ಯೋಜನೆಯ ಅಂಗವಾಗಿ ಬಲದಂಡೆ ನಾಲಾ ಯೋಜನೆ 1965ರ ಯೋಜನೆಯಲ್ಲಿ ಸೇರಿದುದು ನಿಜವಲ್ಲವೇ ?

ಆ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಇ) 1965 ಯೋಜನೆಯಲ್ಲಿ ಬಲದಂಡೆ ನಾಲೆಯಿಂದ ಎಷ್ಟು ಎಕರೆಗೆ ನೀರಾವರಿಯಾಗುತ್ತದೆಂದು ಅಂದಾಜು ಮಾಡಲಾಗಿದೆ ?

ಈ) 1984ರ ಯೋಜನೆಯಲ್ಲಿ ಬಲದಂಡೆ ನಾಲೆಯನ್ನು ಕೈಬಿಡಲು ಕಾರಣವೇನು?

ಎಸ್. ಬಂಗಾರಪ್ಪ, (ಮುಖ್ಯಮಂತ್ರಿಗಳು):

ಅ) ಅಲ್ಲಾ.

ಆ) ವೋಟಿಹೊಳೆ ಯೋಜನೆಯ ಕಾಲುವೆಗಳಿಂದ ಯಗಚಿ ಬಲದಂಡೆಯಲ್ಲಿನ ಜಮೀನಿಗೆ ನೀರಾವರಿಯಾಗುವುದರಿಂದ ಯಗಚಿ ಬಲದಂಡೆ ಕಾಲುವೆಯನ್ನು ಅಳವಡಿಸಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ.ಎಚ್. ಲಕ್ಷ್ಮಣಯ್ಯ : ಯಗಚಿ ಅಣೆಕಟ್ಟು ಯೋಜನೆಯ ಅಂಗವಾಗಿ ಬಲದಂಡೆ ನಾಲಾ ಯೋಜನೆ 1965ರ ಯೋಜನೆಯಲ್ಲಿ ಸೇರಿಲ್ಲ ಎಂದು ಉತ್ತರದಲ್ಲಿ ಹೇಳಿದ್ದಾರೆ. ಇದು ಸತ್ಯಕ್ಕೆ ದೂರವಾದುದು. 1965ನೇ ಇಸವಿಯಲ್ಲಿ ಸುಮಾರು 2 ಸಾವಿರ ಎಕರೆಗೆ ಮೇಲ್ಪಟ್ಟು ಜಮೀನಿಗೆ ನೀರು ಸಿಗುತ್ತದೆಂದು ಅವತ್ತೇ ಪ್ಲಾನ್ ಹಾಕಿದ್ದರೂ. ಅಧಿಕಾರಿಗಳು ತಪ್ಪು ಮತ್ತು ಸುಳ್ಳು ವರದಿ ಕೊಟ್ಟಿದ್ದಾರೆ ಎಂದು ಗೊತ್ತಾಗುತ್ತಿದೆ. ಮತ್ತೆ ಓಟಿಹೊಳೆ ಯೋಜನೆಯ ಕಾಲುವೆಗಳಿಂದ ಯಗಚಿ ಬಲದಂಡೆಯಲ್ಲಿನ ಜಮೀನಿಗೆ ನೀರಾವರಿಯಾಗುವುದರಿಂದ ಯಗಚಿ ಬಲದಂಡೆ ಕಾಲುವೆಯನ್ನು ಅಳವಡಿಸಿಲ್ಲ ಎಂದು ಹೇಳಿದ್ದಾರೆ. ಯಗಚಿ ಡ್ಯಾಮ್ಗೂ ಓಟಿಹೊಳೆಗೂ ಸುಮಾರು 15 ಕಿಲೋಮೀಟರ್ ದೂರ ಆಗುತ್ತದೆ. ಈ 15 ಕಿಲೋಮೀಟರ್ ದೂರದಲ್ಲಿರುವ ಭೂಮಿಗೆ ನೀರು ಬೇಡವೆ ಸ್ವಾಮಿ?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೆ, ಬೇಲೂರು ಯಗಚಿ ಅಣೆಕಟ್ಟು ಯೋಜನೆಯ ಅಂಗವಾಗಿ ಬಲದಂಡೆ ನಾಲಾ ಯೋಜನೆ 1965ರ ಯೋಜನೆಯಲ್ಲಿ ಸೇರಿದುದು ನಿಜವಲ್ಲವೇ ಎಂದು ಹೇಳಿದಾಗ 'ಇಲ್ಲ' ಎನ್ನುವ ಮಾತನ್ನು ಹೇಳಿದ್ದೇವೆ. ಆದ್ದರಿಂದ ಉಳಿದಿರತಕ್ಕ ಪ್ರಶ್ನೆ ಉದ್ಭವವಾಗುವುದಿಲ್ಲ. ಈಗ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ, ಆ ರೀತಿ ಹಿಂದೆ ಆಗಿತ್ತು ಎಂದು ಅದರಲ್ಲಿ ಏನಾಗಿದೆ ಚಿಕ್ಕ ಬ್ಯಾಡಿಗೆರೆ ಗ್ರಾಮದ ಬಳಿ ಜಲಾಶಯ ನಿರ್ಮಾಣ ಮಾಡಬೇಕು ಎಂದು 1966ರಲ್ಲಿ ಅದರ ಬಗ್ಗೆ ಒಂದು ವರದಿ ತಯಾರು ಮಾಡಿದ್ದಾರೆ, 542 ಲಕ್ಷ ರೂಪಾಯಿಯದು. ಆದರಿಂದ 32 ಸಾವಿರ ಎಕರೆಗೆ ನೀರಾವರಿಯಾಗಬೇಕು ಎಂದು, ಓಟಿಹೊಳೆ ಇತ್ಯಾದಿ ಇತ್ಯಾದಿ ಬೇರೆ ಬೇರೆ ಯೋಜನೆಗಳಿವೆ. ಆದರೆ ಬಲದಂಡೆ ನಾಲಾ ಯೋಜನೆ ವಿಚಾರ ಇದರಲ್ಲಿಲ್ಲ. ಅದು ಈ ಯೋಜನೆಗೆ ಸೇರಿಲ್ಲ ಎಂಬ ವಿಚಾರ ಇಟ್ಟುಕೊಂಡಿದ್ದೇವೆ.

ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಆ ಬಗ್ಗೆ ನಾನು ಇನ್ನೊಮ್ಮೆ ಇನ್ವೆಸ್ಟಿಗೇಷನ್ ಮಾಡಿಸಿ ಅವರಿಗೆ ವಿವರಗಳನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಮಾನ್ಯ ಅಧ್ಯಕ್ಷರೇ, ಈ ಯೋಜನೆ ಬಗ್ಗೆ ಮತ್ತೆ ವಿಚಾರ ಮಾಡಿ ತಿಳಿಸುತ್ತೇನೆಂದು ಹೇಳಿದ್ದಾರೆ. ಸುಮಾರು 2 ಸಾವಿರ ಎಕರೆ ನೀರಾವರಿ ಆಗುವ ಯೋಜನೆ ತಯಾರಾಗಿತ್ತು. ಈ ಬಗ್ಗೆ ಕಾಗದ ಪತ್ರಗಳನ್ನು ನನ್ನ ಹತ್ತಿರ ಇವೆ. ನಾನು ಅವನ್ನು ತಮಗೆ ಕೊಡುವುದಕ್ಕೆ ಸಿದ್ಧನಿದ್ದೇನೆ. ದಯಮಾಡಿ ಈ 2ಸಾವಿರ ಎಕರೆಗೆ ನೀರು ಬರುವಹಾಗೆ ನಾಲೆಯನ್ನು ತಾವು ಮಾಡಿಸಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸದಸ್ಯರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ನಾನು ಆ ಬಗ್ಗೆ ಸಂಪೂರ್ಣವಾಗಿ ಇನ್ವೆಸ್ಟಿಗೇಷನ್ ಮಾಡುವುದಕ್ಕೆ ಕಳುಹಿಸಿಕೊಡುತ್ತೇನೆ.

ಮಾನ್ಯ ಸದಸ್ಯರೂ ಕೂಡ ತಮ್ಮಲ್ಲಿರುವ ಕಾಗದಪತ್ರಗಳನ್ನು ಕಳುಹಿಸಿಕೊಡಬೇಕು ಎಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಲ್ಲಿ ಅಕ್ರಮಗಳು.

1653 - ಶ್ರೀ ಬಸವರಾಜ್ ರಾಯರೆಡ್ಡಿ (ಯಲಬುರ್ಗ): ಮಾನ್ಯ ಸಣ್ಣ ಕೈಗಾರಿಕಾ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಕೈಮಗ್ಗ ನಿಗಮದ ವ್ಯವಸ್ಥಾಪಕ ನಿರ್ದೇಶಕರು, ಮತ್ತು ಅಧಿಕಾರಿಗಳು ಇತ್ತೀಚಿನ ವರ್ಷಗಳಲ್ಲಿ ಕೈಗೊಂಡ ವಿದೇಶೀ ಪ್ರವಾಸಗಳಲ್ಲಿ ಅತೀ ಹೆಚ್ಚಿನ ವೆಚ್ಚದಿಂದ ಕೂಡಿದ್ದರೂ ಅದರಿಂದ ನಿಗಮಮಕ್ಕೆ ಯಾವುದೇ ರೀತಿಯ ಲಾಭವನ್ನು ತಂದಿಲ್ಲವೆಂಬ ಹೇಳಿಕೆಯನ್ನು ಸಮರ್ಥಿಸಿ.

ಆ) ಈ ಮೇಲಿನ ಹೇಳಿಕೆಯ ನಂತರ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಮತ್ತು ಅಧಿಕಾರಿಗಳು ವಿದೇಶ ಪ್ರವಾಸ ಕೈಗೊಂಡಿರುವುದು ಸರಿಯಲ್ಲ.

ಇ) ವ್ಯವಸ್ಥಾಪಕ ನಿರ್ದೇಶಕರು, ಅಧಿಕಾರಿಗಳು 1989-90 ಮತ್ತು 90-91ರಲ್ಲಿ ಕೈಗೊಂಡ ವಿದೇಶ ಪ್ರವಾಸಗಳ ಸಂಖ್ಯೆ ಮತ್ತು ದೇಶಗಳು ಮತ್ತು ಅಧಿಕಾರಿಗಳ ಹುದ್ದೆ.

ಈ) ಸರ್ಕಾರದ ಅನುಮತಿ ಇತ್ತೇ?

ಉ) ಸರ್ಕಾರದ ಅನುಮತಿ ಇಲ್ಲದೆ ಕೈಗೊಂಡ ಈ ಪ್ರವಾಸದಿಂದ ಆತಿ ಹೆಚ್ಚಿನ ವೆಚ್ಚ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ) ಇಂತಹ ಅನಾವಶ್ಯಕ ವೆಚ್ಚಗಳನ್ನು ಮುಂದೆ ಕಡಿತಗೊಳಿಸಲು ಮತ್ತು ಅಂತಹ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಲು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೇ ಮತ್ತು ಅಂತಹ ಹಣವನ್ನು ಕೈಮಗ್ಗ ಉದ್ಯಮ ಮತ್ತು ನೇಕಾರರ ಉತ್ತಮ ಸೌಲಭ್ಯವನ್ನು ಕಲ್ಪಿಸಲು ವೆಚ್ಚ ಮಾಡಬೇಕು.

ಶ್ರೀ ನಜೀರ್ ಅಹಮದ್, (ಸಣ್ಣ ಕೈಗಾರಿಕಾ ರಾಜ್ಯಮಂತ್ರಿಗಳು):

ಅ) 1987-88, 88-89 ಮತ್ತು 1989-90ರ ಸಾರ್ವಜನಿಕ ಉದ್ಯಮ ಸಮಿತಿಯ ವರದಿಯಲ್ಲಿ ಅಂತಹ ವಿವರಗಳಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) 1989-90ನೇ ಸಾಲಿನಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಯಾವುದೇ ವಿದೇಶ ಪ್ರವಾಸವನ್ನು ಕೈಗೊಂಡಿರುವುದಿಲ್ಲ. ವೆಸ್ಟ್ ಜರ್ಮನಿಯ ಫ್ರಾಂಕ್ಫೋರ್ಟ್‌ನಲ್ಲಿ ನಡೆದ ಅಂತರ ರಾಷ್ಟ್ರೀಯ ಮೇಳದಲ್ಲಿ ಶ್ರೀ ಅರವಿಂದ್ ರಾಜಮಾನ್ಯ, ಮುಖ್ಯ ವ್ಯವಸ್ಥಾಪಕರು (ಮಾರುಕಟ್ಟೆ) ಇವರು ಭಾಗವಹಿಸಿರುತ್ತಾರೆ. ಹಾಗೂ ಫ್ರಾನ್ಸ್, ಸ್ವಿಟ್ಜರ್ಲೆಡ್, ಇಟಲಿ ಮತ್ತು ಡೆನ್ಮಾರ್ಕ್‌ಗಳಿಗೆ ಭೇಟಿ ಕೊಟ್ಟಿರುತ್ತಾರೆ. 1990-91ನೇ ಸಾಲಿನಲ್ಲಿ ಶ್ರೀಮತಿ ವೀಣಾಶ್ರೀರಾಮರಾವ್ ಐಎಎಸ್, ವ್ಯವಸ್ಥಾಪಕ ನಿರ್ದೇಶಕರು ಮತ್ತು ಶ್ರೀ ಬಿ.ವಿ. ರವೀಂದ್ರನಾಥ, ಸಹಾಯಕ ವ್ಯವಸ್ಥಾಪಕರು (ರಫ್ತು) ಇವರು ವೆಸ್ಟ್ ಜರ್ಮನಿಯ ಮುನೀಚ್ನಲ್ಲಿ ನಡೆದ ಏಷ್ಯನ್ ಸಿಲ್ಕ್‌ಫೇರ್‌ನಲ್ಲಿ ಬಾಗವಹಿಸಿರುತ್ತಾರೆ. ಹಾಗೂ ವ್ಯವಸ್ಥಾಪಕ ನಿರ್ದೇಶಕರು ಇಂಗ್ಲೆಡ್, ಡೆನ್ಮಾರ್ಕ್ ಹಾಗೂ ಫ್ರಾನ್ಸ್‌ಗೆ ಭೇಟಿ ಕೊಟ್ಟಿರುತ್ತಾರೆ. ಸಹಾಯಕ ವ್ಯವಸ್ಥಾಪಕ (ರಫ್ತು) ಇವರು ಡೆನ್ಮಾರ್ಕ್ ಮತ್ತು ಹಾಲೆಂಡ್‌ಗೆ ಸದರಿ ಪ್ರವಾಸದೊಂದಿಗೆ ಭೇಟಿ ಕೊಟ್ಟಿರುತ್ತಾರೆ.

ಈ) ಹೌದು. ಹಿಂದಿನ ವ್ಯವಸ್ಥಾಪಕ ನಿರ್ದೇಶಕರಿಗೆ ಮುನಿಚ್ನಲ್ಲಿ ನಡೆದ ಏಷ್ಯನ್ ಸಿಲ್ಕ್ ಫೇರ್‌ನಲ್ಲಿ ಭಾಗವಹಿಸಲು ಸರ್ಕಾರದ ಅನುಮತಿ ಇತ್ತು.